**ದಿನಾಂಕಃ19.02.2026 ರಂದು ಸಾಕ್ಷಿದಾರರು ಹಾಜರಿದ್ದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಸಿ.ಕೆ., ವಕೀಲರಿಂದಃ–**

1. ನಾನು ಇಂಜಿನಿಯರಿಂಗ್ ಪದವಿ ವ್ಯಾಸಾಂಗವನ್ನು 1981 ರಿಂದ 1985 ರವರೆಗೆ ಬೆಂಗಳೂರಿನಲ್ಲಿ ಮಾಡಿದ್ದೇನೆ. ನಾನು ಪಿ.ಯು.ಸಿ., ವಿದ್ಯಾಭ್ಯಾಸವನ್ನು 1980 ಮತ್ತು 1981 ರಲ್ಲಿ ದಾವಣಗೆರೆಯಲ್ಲಿ ಮಾಡಿರುತ್ತೇನೆ. 1981 ರಲ್ಲಿ ವಾದಿ ನನ್ನ ಅಣ್ಣ ಪಿ.ಯು.ಸಿ. ಮತ್ತು ಎಂ.ಎಸ್.ಇ. ವಿದ್ಯಾಭ್ಯಾಸವನ್ನು ಧಾರವಾಡದಲ್ಲಿ ಹಾಸ್ಟೆಲ್ ನಲ್ಲಿ ಉಳಿದುಕೊಂಡು ಮಾಡಿದ್ದರು. ನಾನು ಸಹ ಹಾಸ್ಟೆಲ್ ನಲ್ಲಿ ಉಳಿದುಕೊಂಡು ವಿಧ್ಯಾಬ್ಯಾಸ ಮಾಡಿದ್ದೇನೆ. ನನ್ನ ತಾಯಿ ರಾಮಕ್ಕ ದಿನಾಂಕ.10.07.2007 ರಲ್ಲಿ ಮರಣ ಹೊಂದಿರುತ್ತಾರೆ.

2. ನನ್ನ ತಾಯಿ ಜೀವಿತಕಾಲದಲ್ಲಿ ಕೆನರಾ ಬ್ಯಾಂಕ್, ವಿಜಯ ಬ್ಯಾಂಕ್, ಎಸ್.ಬಿ.ಐ., ಮತ್ತು ಗ್ರಾಮೀಣ ಬ್ಯಾಂಕ್ ಗಳಲ್ಲಿ ಅಕೌಂಟ್ ಮತ್ತು ಠೇವಣಿ ಇಟ್ಟಿದ್ದರು. ನನ್ನ ತಾಯಿ ಕೆನರಾ ಬ್ಯಾಂಕ್ ಹಿರಿಯೂರು ಶಾಖೆಯಲ್ಲಿ ಎಷ್ಟು ಮತ್ತು ಯಾವ ಮೊತ್ತದ ಠೇವಣಿ ಇಟ್ಟಿದ್ದರು ಎಂದು ನನಗೆ ನೆನಪಿಲ್ಲ. ಕೆನರಾ ಬ್ಯಾಂಕ್ ನಲ್ಲಿ ಖಾತೆ ಸಂಖ್ಯೆ KD\0328/200 ರಲ್ಲಿ ರೂ.60,895, ಖಾತೆ ಸಂಖ್ಯೆ KD\0348/2004 ರಲ್ಲಿ 69,683/– ರೂಗಳು, KD\03/002106 ಮತ್ತು KD\03/002107 ರಲ್ಲಿ ರೂ.20,000 ಹಾಗೂ KD\03/00233 ರಲ್ಲಿ 96,100/– ರೂಗಳನ್ನು ಠೇವಣಿ ಇಟ್ಟಿದ್ದರು ಎಂದರೆ ಸರಿ. ಅದರಂತೆ ಚಿತ್ರದುರ್ಗದ ಗ್ರಾಮೀಣ ಬ್ಯಾಂಕ್ ನಲ್ಲಿ 3 ಠೇವಣಿ ಇಟ್ಟಿದ್ದರು ಎಂದರೆ ಸರಿ. ಸದರಿ ಬ್ಯಾಂಕ್ ನಲ್ಲಿ KD\0151/2007 ರಲ್ಲಿ 67,800/– ರೂಗಳು, KD/0352/2006 ರಲ್ಲಿ 75,000/– ರೂಗಳು ಹಾಗೂ KD\0251/2004 ರಲ್ಲಿ 75,000/– ರೂಗಳನ್ನು ಠೇವಣಿ ಇಟ್ಟಿದ್ದರು ಎಂದರೆ ಸರಿ.

3. ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಹಿರಿಯೂರು ಶಾಖೆಯಲ್ಲಿ 2 ಠೇವಣಿ ನನ್ನ ತಾಯಿ ಹೆಸರಿನಲ್ಲಿ ಇತ್ತು ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಾನೇ ಮಾಡಿಸಿದ್ದೆ ಎಂದು ನುಡಿಯುತ್ತಾರೆ. ಸದರಿ ಬ್ಯಾಂಕ್ ಖಾತೆ ಸಂಖ್ಯೆ ನನಗೆ ನೆನಪಿಲ್ಲ, ಒಂದು ಖಾತೆಯಲ್ಲಿ 78,639/- ಮತ್ತು ಇನ್ನೊಂದು ಖಾತೆಯಲ್ಲಿ 38,816 ರೂಗಳು ಠೇವಣಿ ಇದ್ದವು ಎಂದರೆ ಸರಿ. ವಿಜಯಾ ಬ್ಯಾಂಕ್ ಹಿರಿಯೂರಿನಲ್ಲಿ ಒಂದು ಖಾತೆ ಇದ್ದು ಅದರಲ್ಲಿ 90,753/- ಠೇವಣಿ ಇತ್ತು ಎಂದರೆ ಸರಿ. ನನ್ನ ತಾಯಿ ಸದರಿ ಎಲ್ಲಾ ಖಾತೆಗಳಿಗೆ ನನ್ನನ್ನು ನಾಮಿನಿಯಾಗಿ ನೀಡಿದ್ದರು ಎಂದರೆ ಸಾಕ್ಷಿಯು ಅವುಗಳನ್ನು ನಾನೇ ಮಾಡಿಸಿದ್ದೆ ಎಂದು ನುಡಿಯುತ್ತಾರೆ.

4. ಕೆನರಾ ಬ್ಯಾಂಕ್ ನಲ್ಲಿರುವ 20,000/- ರೂಗಳ 2 ಠೇವಣಿಗಳಿಗೆ ನನ್ನ ಮಕ್ಕಳನ್ನು ನಾಮಿನಿಯಾಗಿ ಮಾಡಲಾಗಿತ್ತು.

**ವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲಿಗಾಗಿ ಅವಕಾಶ ನೀಡಿ ಮುಂದೂಡಲಾಯಿತು. ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಮುಕ್ತ ಹೇಳಿಕೆ ಮತ್ತು ನನ್ನ ಉಕ್ತ ಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ,. ಹಿರಿಯೂರು.